ಮಾಡುತ್ತವೆ. ನಮ್ಮ ಸಂಪ್ರದಾಯಗಳು ಕೇವಲ ಪದ್ಧತಿಗಳಲ್ಲ. ಅವು ನಾವು ಯಾರೆಂಬುದನ್ನು ಎತ್ತಿ ತೋರುವ ಹೃದಯದ ನಾಡಿ ಬಡಿತಗಳು.

◆ ಕವಿತೆಯಲ್ಲಿ ನೀವು ಏನನ್ನು ಹುಡುಕುತ್ತಿದ್ದೀರಿ?

ಕಾವ್ಯ ಓದುವಾಗಲೆಲ್ಲಾ ನಾನು ಹೆಚ್ಚು ಅದರ ಭಾವಜಗತ್ತಿನ ಕಡೆಗೆ ವಾಲುತ್ತೇನೆ. ನಾನು ಓದುವ ತುಣುಕಿನ ಪ್ರತಿಧ್ವನಿಯನ್ನ ನಿರ್ದಿಷ್ಟ ಭಾವಗಳ ಜೊತೆಗೆ ತಳುಕು ಹಾಕ ಬಯಸುತ್ತೇನೆ. ನಾನು ಓದುವ ಪದ್ಯದ ಭಾವಕೋಶ, ಕವಿ ಅದನ್ನು ಬರೆದ ಕಾಲಕ್ಕೆ ಮತ್ತು ಬರೆಯುವಾಗಿನ ಅವನ ಮನಸ್ಥಿತಿ ಹೇಗಿತ್ತು ಎಂಬಲ್ಲಿಗೆ ಕರೆದೊಯ್ಯಬೇಕೆಂದು ನಾನು ಬಯಸುತ್ತೇನೆ. ನಾನು ಬರೆಯುವಾಗಲೂ ಅದಕ್ಕೇ ಹೆಚ್ಚು ಒತ್ತು ಕೊಡುತ್ತೇನೆ. ಜೊತೆಗೆ ಕಾವ್ಯವೆಂದರೆ ವಿಮೋಚನೆ. ಕಾವ್ಯದಲ್ಲಿ ನಾನು ಸತ್ಯವನ್ನು ಹುಡುಕುತ್ತೇನೆ. ಸತ್ಯ ಅಂದ್ರೆ ಕೇವಲ facts ಅಲ್ಲ. ಪದಗಳ ನಡುವಿನ ಮೌನದಲ್ಲಿ ಉಸಿರಾಡುವ ನಾದ. ನಾನು ನನ್ನ ತಾಯ್ನುಡಿಯಲ್ಲಿರುವ ಲಯವನ್ನೂ, ಪ್ರತಿ ಸಾಲಿನಲ್ಲಿ ಮಿಡಿಯುವ ನಮ್ಮ ಪೂರ್ವಜರ ಹೃದಯ ಬಡಿತವನ್ನೂ ಕೇಳುತ್ತೇನೆ. ನನ್ನ ಪ್ರಕಾರ ಕವಿತೆಯು ನೆಲದ ದನಿಯಲ್ಲಿ ಬೇರೂರಿ ಮಾತನಾಡಬೇಕು. ಅದು ನಮ್ಮ ಸಂತಸ, ಸಂಕಟ ಮತ್ತು ಭರವಸೆಗಳನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹೊತ್ತೊಯ್ಯಬೇಕು. ಕಾವ್ಯವೆಂದರೆ ಕಥನ. ಕಥೆಗಳನ್ನು ಆಸ್ತಿಯಂತೆ ಹಂಚಿಕೊಳ್ಳುವ, ಸ್ಥಳೀಯ ತಿಳಿವಳಿಕೆಯನ್ನು ಹಾಡಿನ ಮೂಲಕ ಹೇಳುವ ಒಂದು ಹಳ್ಳಿಯಲ್ಲಿ ಬೆಳೆದ ನನಗೆ, ಕಾವ್ಯ ಉಸಿರಾಟದ ಹಾಗೆ ಅನಿವಾರ್ಯವೂ ಸಹಜವೂ ಆಯಿತು. ನನ್ನಂತಹ ಅಲಕ್ಷಿತ ಧ್ವನಿಗಳನ್ನು ಸುಮ್ಮನಾಗಿಸಲು ಪ್ರಯತ್ನಿಸುವ ಈ ಜಗತ್ತಿನಲ್ಲಿ, ಕಾವ್ಯ ನನ್ನ ಪ್ರತಿರೋಧ ಮತ್ತು ಆಶ್ರಯ ತಾಣವಾಯಿತು. ಎಲ್ಲಿ ಕನಸುಗಳಿವೆ ಅಲ್ಲಿ ಭಾಷೆಯಿದೆ; ಎಲ್ಲಿ ಭಾಷೆಯಿದೆ ಅಲ್ಲಿ ಕಾವ್ಯವಿದೆ!.

◆ ಕೀನ್ಯಾದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಹೇಗಿದೆ?

ಕೀನ್ಯಾದಲ್ಲಿ ಸಾರ್ವಜನಿಕ ಶಿಕ್ಷಣವು ಏಕಕಾಲಕ್ಕೆ ಉಡುಗೊರೆಯೂ ಹೌದು, ಹೋರಾಟವೂ ಹೌದು. ಎರಡು ವರ್ಷಗಳ ಪೂರ್ವ ಪ್ರಾಥಮಿಕ ಮತ್ತು ನಂತರದ ಎಂಟು ವರ್ಷಗಳ ಪ್ರಾಥಮಿಕ ಶಾಲೆಯಿಂದ ನಮ್ಮ ಶಿಕ್ಷಣ ಆರಂಭವಾಗುತ್ತದೆ. ಹೆಚ್ಚಿನ ಮಕ್ಕಳು ಓದೋದನ್ನ, ಬರೆಯೋದನ್ನ ಮತ್ತು ಭವಿಷ್ಯದ ಕನಸು ಕಾಣೋದನ್ನ ಕಲಿಯೋದು ಇಲ್ಲಿಯೇ. ನಂತರ ನಾಲ್ಕು ವರ್ಷಗಳ ಮಾಧ್ಯಮಿಕ ಶಿಕ್ಷಣ ಬರುತ್ತದೆ. ಅದರ ನಂತರ, ಯಶಸ್ವಿಯಾದವರು ವಿಶ್ವವಿದ್ಯಾಲಯ ಅಥವಾ ವೃತ್ತಿಪರ ತರಬೇತಿಗೆ ಹೋಗುತ್ತಾರೆ.

ಉಚಿತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಒದಗಿಸುವುದರ ಮೂಲಕ ಸರ್ಕಾರವು ದೊಡ್ಡ ಕ್ರಮವನ್ನು ಕೈಗೊಂಡಿದೆ. ಆದರೆ ವಾಸ್ತವವಾಗಿ, ಕಿಕ್ಕಿರಿದ ತರಗತಿ ಕೊಠಡಿಗಳು, ಸಂಪನ್ಮೂಲಗಳ ಕೊರತೆ, ಶಿಕ್ಷಕರ ಕೊರತೆ ಮತ್ತು ಕಡಿಮೆ ವೇತನ ಪಡೆಯುವ ಶಿಕ್ಷಕರು, ದೂರದ ಶಾಲೆಗಳಿಗೆ ನಡೆದುಕೊಂಡೇ ಹೋಗಬೇಕಾದ ಅನಿವಾರ್ಯತೆ ಹಾಗೂ ಬಡತನದ ಕಾರಣಕ್ಕೆ ಹಲವರು ಶಾಲೆ ತೊರೆದರೆ, ಹುಡುಗಿಯರು ಅಕಾಲಿಕ ಮದುವೆ ಅಥವಾ ಮುಟ್ಟು ಮತ್ತಿತರ ಸಮಸ್ಯೆಗಳಿಂದಾಗಿ ಶಾಲೆಯಿಂದ ಹೊರಗುಳಿಯುತ್ತಾರೆ.

◆ ಕೀನ್ಯಾದ ಸಾರ್ವಜನಿಕ ಬದುಕಿನಲ್ಲಿ ಹೆಣ್ಣು ಮಕ್ಕಳ ಪಾಲುದಾರಿಕೆ ಯಾವ ರೀತಿ ಇದೆ?

ಕೀನ್ಯಾದ ಮಹಿಳೆಯರು ರಾಜಕೀಯ, ಶಿಕ್ಷಣ, ವ್ಯಾಪಾರ ಮತ್ತು ನಾಗರಿಕ ಸಮಾಜದ ಮತ್ತಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ಸಾಮಾಜಿಕ ರೂಢಿಯ ಚೌಕಟ್ಟನ್ನು ಕೀನ್ಯಾದ ಮಹಿಳೆಯರು ಯಶಸ್ವಿಯಾಗಿ ಮುರಿದಿದ್ದಾರೆ ಎನ್ನಬಹುದು. ಕೀನ್ಯಾದ ಸಾರ್ವಜನಿಕ ಬದುಕಿನಲ್ಲಿ ಮಹಿಳೆಯರ ಪಾತ್ರವನ್ನು ಧೈರ್ಯ, ಹೋರಾಟ ಮತ್ತು ಆಶಾವಾದದಿಂದ ಹೆಣೆದ ಒಂದು ಜಾಲ ಅನ್ನಬಹುದು. ನಾವು ಮಹಿಳೆಯರು ಬಹಳಷ್ಟು ಮುಂದೆ ಹೋಗಿದ್ದೇವೆ, ಆದರೆ ಸಂಪೂರ್ಣ ಸಮಾನತೆಯ ಪ್ರಯಾಣ ಇನ್ನೂ ಮುಂದುವರೆಯುತ್ತಲೇ ಇದೆ. ಇತ್ತೀಚೆಗೆ ಕೀನ್ಯಾದ ಮಹಿಳೆಯರು ಸಮುದಾಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. 2010ರ ಹೊಸ ಸಂವಿಧಾನ ರಚನೆಯ ನಂತರ, ಹೆಚ್ಚಿನ ಮಹಿಳೆಯರು ಸಂಸತ್ತು, ಜಿಲ್ಲಾಡಳಿತ ಮತ್ತು ಸಾರ್ವಜನಿಕ ವಲಯಗಳನ್ನು ಪ್ರವೇಶಿಸಿದ್ದಾರೆ. ಹಾಗಂತ ಸವಾಲುಗಳು ಇಲ್ಲವೇ ಇಲ್ಲ ಅಂತಲ್ಲ. ಸಾಂಸ್ಕೃತಿಕ ರೂಢಿ ನಿಯಮಗಳು, ಆರ್ಥಿಕ ಅಡೆತಡೆಗಳು ಮತ್ತು ಲಿಂಗ